
ವಸ್ತುಸ್ಥಿತಿಯನ್ನೂ ಧ್ವನಿಸುತ್ತದೆ. ಇಲ್ಲಿ ಇಬ್ಬರು ನಾಯಕರಿದ್ದು ಒಬ್ಬನು ಕವಿ ಫರ್ನಾಂದೊ ಪೆಸೋಅ; ಕಾದಂಬರಿಯ ವರ್ತಮಾನದಲ್ಲಿ ಆಗಲೇ ಸತ್ತುಹೋಗಿರುವವನು. ಇನ್ನೊಬ್ಬ, ಪೆಸೋಅನ ಕಾವ್ಯನಾಮಿಗಳಲ್ಲಿ ಒಬ್ಬನಾದ ರಿಕಾರ್ಡೊ ರೇಯಿಸ್. ಇವನು ಪೋರ್ಚುಗಲ್ಲಿನ ರಾಜಕೀಯ ಸ್ಥಿತ್ಯಂತರಗಳನ್ನು ಎದುರಿಸಲಾಗದೆ ಬ್ರೆಝಿಲ್ಲಿಗೆ ಓಡಿಹೋದವನು; ಹದಿನಾರು ವರ್ಷ ಅಲ್ಲಿಯೇ ಇದ್ದುಬಿಟ್ಟವನು; 40 ವಯಸ್ಸಿನ ಆಸುಪಾಸಿನಲ್ಲಿರುವ ಅವಿವಾಹಿತ; ವೃತ್ತಿಯಲ್ಲಿ ವೈದ್ಯ. ಜೊತೆಗೆ ಕವಿ ಕೂಡ.

ಬ್ರೆಝಿಲ್ಲಿನಲ್ಲಿಯೇ ಇದ್ದ ರಿಕಾರ್ಡೊ ರೇಯಿಸ್ ತನ್ನ ಜನ್ಮದಾತ ಪೆಸೋಅ ಸತ್ತನೆಂಬ ಸುದ್ದಿ ಕೇಳಿ 1935ರಲ್ಲಿ ಲಿಸ್ಬನ್ನಿಗೆ ಹಿಂತಿರುಗಿದವನು ಒಂದು ಹೋಟೆಲಿನಲ್ಲಿ ತಂಗುತ್ತಾನೆ. ಅವನಿಗೆ ಹೋಟೆಲಿನಲ್ಲಿ ಕೆಲಸಮಾಡುವ ಲಿದಿಯಾ ಎಂಬುವಳ ಜೊತೆ ಲೈಂಗಿಕ ಸಂಬಂಧವಿದ್ದರೆ, ಮಾರ್ಸೆಂದಾ ಎಂಬ ಮಧ್ಯಮ ವರ್ಗದ ಹೆಣ್ಣಿನ ಜೊತೆ ಒಂದು ಬಗೆಯ 'ಪ್ಲೆಟೋನಿಕ್' ಸಂಬಂಧವೂ ಉಂಟು. ಅದು ಸಾಲಝಾರ್ ಎಂಬ ಸರ್ವಾಧಿಕಾರಿ ಪೋರ್ಚುಗಲ್ಲನ್ನು ಆಳುತ್ತಿದ್ದ ಕಾಲ; ಫ್ರಾಂಕೊ, ಮುಸೋಲಿನಿ, ಹಿಟ್ಲರ್ ಮುಂತಾದವರಿದ್ದ ಯೂರೋಪಿನಲ್ಲೂ ಸರ್ವಾಧಿಕಾರ ಪ್ರಬಲವಾಗುತ್ತಿದ್ದ ಕಾಲ. ರಿಕಾರ್ಡೊ ರೇಯಿಸ್, ಲಿಸ್ಬನ್ನಿನ ಚಕ್ರವ್ಯೂಹದಂಥ ಬೀದಿಗಳನ್ನು ಸುತ್ತುತ್ತಿರುವಾಗ ಪೆಸೋಅನ ಭೂತ ಅವನನ್ನು ಹನ್ನೆರಡು ಸಲ ಭೇಟಿಯಾಗುತ್ತದೆ. ಇಬ್ಬರೂ ರೊಮ್ಯಾಂಟಿಕ್ ಬದುಕಿನ ಬಗ್ಗೆ, ಸಾವಿನ ಬಗ್ಗೆ, ಕಲೆಯ ಸ್ವಭಾವದ ಬಗ್ಗೆ, ಜೀವನ ಮತ್ತು ಸಾಹಿತ್ಯದ ಬಗ್ಗೆ, ವಾಸ್ತವ ಸ್ಥಿತಿ ಮತ್ತು ಆದರ್ಶದ ಬಗ್ಗೆ, ವ್ಯಕ್ತಿಗತ ಅಸ್ಮಿತೆಯ ಬಗ್ಗೆ, ರಾಜಕೀಯ, ಧರ್ಮ, ಇತಿಹಾಸ ಮುಂತಾದವುಗಳ ಬಗ್ಗೆ ತುಂಬ ಲವಲವಿಕೆಯಿಂದ ಚರ್ಚಿಸುತ್ತಾರೆ. ಈ ಚರ್ಚೆಗಳು ಫ್ಯಾಸಿಸಮ್ಮಿನ ಬೆಳವಣಿಗೆಯಿಂದಾಗಿ ಭಯಭೀತಗೊಂಡ ಆಧುನಿಕ ಜಗತ್ತಿಗೊಂದು ಪರ್ಯಾಯ ಪಥ್ಯವಾಗುತ್ತವೆ. ರಿಕರ್ಡೊ ರೇಯಿಸ್, ಪೆಸೋಅನನ್ನು ಮಣ್ಣುಮಾಡಿರುವ ಸ್ಮಶಾನಕ್ಕೆ ಹೋದಾಗ ಅದು ಸತ್ತಹಾಗಿರುವ ಅಥವಾ ನಿಷ್ಕ್ರಿಯವಾಗಿರುವ ಲಿಸ್ಬನ್ ನಗರಕ್ಕೆ ಕನ್ನಡಿ ಹಿಡಿದಂತಿರುತ್ತದೆ.



ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕಾದಂಬರಿಯುದ್ದಕ್ಕೂ ಬದುಕಿರುವವರ ಮತ್ತು ಸತ್ತವರ ನಡುವಣ ವ್ಯತ್ಯಾಸ ನಿಧಾನವಾಗಿ ಕರಗಿಹೋಗುವಂತಿದೆ. ರಿಕಾರ್ಡೊ ರೇಯಿಸ್, ಫ್ಯಾಸಿಸ್ಟ್ ಆಳ್ವಿಕೆಯಲ್ಲಿರುವ ಲಿಸ್ಬನ್ನಿನಲ್ಲಿ ಬದುಕಿದ್ದೂ ಸತ್ತಂತಿರುವವರ ನಡುವೆ ತನ್ನ ಜಾಗವನ್ನು ಹುಡುಕಿಕೊಂಡಂತಿದೆ. ಫ್ಯಾಸಿಸಂ ಎನ್ನುವುದು ಅವನ ಅಂತರಂಗದ ಒಂದು ಭಾಗವಾಗಿಲ್ಲದಿರುವುದರಿಂದಲೇ ಅವನು ಲಿಸ್ಬನ್ನಿನ ಅಸ್ತವ್ಯಸ್ತ ಜೀವನದಲ್ಲಿ ಸಂತೃಪ್ತಿಯಿಂದಿರಬಲ್ಲ. ಅಥವಾ ಕಾವ್ಯಾತ್ಮಕವೂ ತಾತ್ವಿಕವೂ ಆದೊಂದು ಜಗತ್ತು ಅವನ ಅಂತರಂಗದಲ್ಲಿರುವುದರಿಂದಲೇ ಅವನು ತನ್ನ ಕಾಲದ ಕೆಡುಕಿನಿಂದ ಧೃತಿಗೆಡದೆ ಸುರಕ್ಷಿತವಾಗಿರಬಲ್ಲ.